**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ**
**ನ್ಯಾಯಾಲಯ, ಕನಕಪುರ**

**ಸಿ.ಸಿ ನಂ. 1180/2019**

ದಿನಾಂಕಃ**. 07.02.2026.** ರಂದು ಸಾಕ್ಷಿಗೆ ಮಧ್ಯಾಹ್ನ ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಚಾಸಾ-**7** | ಪ್ರಾಸಾ-**7** |
| ಹೆಸರು | - ತುಳಸಿದಾಸ್ |
| ತಂದೆ ಹೆಸರು | - ರಾಮು |
| ವಯಸ್ಸು | - **46** |
| ಉದ್ಯೋಗ | - ಎ.ಎಸ್,ಐ |
| ವಿಳಾಸ | - ಕನಕಪುರ |

**ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-**

ನಾನು **2016** ರಿಂದ **2020** ರವರೆಗೇ ಸಾತನೂರು ಪೋಲಿಸ್ ಠಾಣೆಯಲ್ಲಿ ಪೋಲಿಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ **19.07.2019** ರಂದು ಮದ್ಯಾಹ್ನ **3.30** ಗಂಟೆಗೆ ನಾನು ಠಾಣಾ ಎಸ್,ಹೆಚ್.ಒ ಕರ್ತವ್ಯದಲ್ಲಿದ್ದಾಗ ಪಿರ್ಯಾದಿ ನೀಡಿದ ದೂರನ್ನು ಸ್ವೀಕರಿಸಿಕೊಂಡು ಠಾಣಾ ಅಪರಾಧ ಸಂಖ್ಯೆ **92/2019** ರಂದು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ಮಾನ್ಯ ಸಲ್ಲಿಸಿರುತ್ತೇನೆ,

ಸಾಕ್ಷಿ ಒಂದು ದೂರನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಎಂದು ಗುರುತಿಸಿದ್ದು, **ದೂರನ್ನು** ಈಗಾಗಲೇ ನಿಪಿ-**1** ಎಂದು, ಸಾಕ್ಷಿ ಸಹಿಯನ್ನು ನಿಪಿ-**1**(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ಒಂದು ಪ್ರಥಮ ವರ್ತಮಾನ ವರದಿಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ಪ್ರಥಮ ವರ್ತಮಾನ ವರದಿಯನ್ನು ಎಂದು ಗುರುತಿಸಿದ್ದು, **ಪ್ರಥಮ ವರ್ತಮಾನ**

**ವರದಿಯನ್ನು** ನಿಪಿ-6 ಎಂದು, ಸಾಕ್ಷಿ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

ದಿ. 20.07.2019 ರಂದು ಘಟನಾ ಸ್ಥಳದ ಪಂಚನಾಮೆ ಮಾಡಲು ಚಾ.ಸಾ. 4 ಮತ್ತು 5 ರವರಿಗೆ ನೋಟಿಸನ್ನು ನೀಡಿ ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚನಾಮೆಯನ್ನು ಬೆಳಗ್ಗೆ 10 ಗಂಟೆಯಿಂದ 10.40 ಗಂಟೆವರೆಗೆ ಚಾ.ಸಾ. 1 ರವರು ತೋರಿಸಿದಂತೆ ಚಾ.ಸಾ. 3 ಮತ್ತು 4 ರವರ ಸಮಕ್ಷಮ ಪಂಚನಾಮೆ ಮಾಡಿ ಚಾ.ಸಾ, 1 ರವರು ಹಾಜರುಪಡಿಸಿದ 3 ಅಡಿ ಉದ್ದದ ದೊಣ್ಣೆಯನ್ನು ವಶಪಡಿಸಿಕೊಂಡೆ.

ದೊಣ್ಣೆಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯೂಲಯದ ಮುಂದೆ ಇರುವ ಒಂದು ದೊಣ್ಣೆಯನ್ನು ನೋಡಿ ಗುರುತಿಸಿದ್ದು, ದೊಣ್ಣೆಯನ್ನು ಈಗಾಗಲೇ ಎಂ.ಓ 1 ಎಂದು ಗುರುತಿಸಲಾಗಿದೆ.

ಸಾಕ್ಷಿ ಪಂಚನಾಮೆಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ಪಂಚನಾಮೆ ಎಂದು ಗುರುತಿಸಿದ್ದು, **ಪಂಚನಾಮೆಯನ್ನು** ಈಗಾಗಲೇ ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ನಂತರ ಠಾಣೆಗೆ ಬಂದು ಮಾಲುಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆ.

ದಿನಾಂಕಃ 21.07.2019 ರಂದು ಚಾ.ಸಾ. 2 ಮತ್ತು ಚಾ.ಸಾ. 3 ರವರ ಹೇಳಿಕೆಗಳನ್ನು ಪಡೆದುಕೊಂಡೆ. ದಿನಾಂಕಃ 29.07.2019 ರಂದು ಚಾ.ಸಾ. 1 ರವರ ಮರುಹೇಳಿಕೆ ಪಡೆದುಕೊಂಡೆ. ಅದೇ ದಿನ ಗಾಯದ ಪ್ರಮಾಣಪತ್ರವನ್ನು ಕೇಳಿ ಸಾತನೂರು ಸರ್ಕಾರಿ ಆಸ್ಪತ್ರೆಗೆ ಪತ್ರ ಬರೆದೆ.

ದಿ.20.08.2019 ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಬಂದು ನನ್ನ ಮುಂದೆ ಹಾಜರಾದರು. ದಿನಾಂಕಃ 23.09.2019

ಸಾತನೂರು ಸರ್ಕಾರಿ ಆಸ್ಪತ್ರೆಯಿಂದ ಚಾ.ಸ್ನಾ. **1** ರವರ ಗಾಯದ ಪ್ರಮಾಣಪತ್ರವನ್ನು ಪಡೆದುಕೊಂಡೆ.

ಸಾಕ್ಷಿ ಒಂದು ಗಾಯದ ಪ್ರಮಾಣಪತ್ರವನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಎಂದು ಗುರುತಿಸಿದ್ದು ಮತ್ತು ಸದರಿ ಗಾಯದ ಪ್ರಮಾಣಪತ್ರ ಎಂದು ಗುರುತಿಸಿದ್ದು, ಗಾಯದ ಪ್ರಮಾಣಪತ್ರವನ್ನು ಈಗಾಗಲೇ ನಿ.ಪಿ.**5** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.**5(**ಬಿ**)** ಎಂದು ಗುರುತಿಸಲಾಯಿತು.

ನಂತರ ತನಿಖೆಯನ್ನು ಮುಕ್ತಾಯಗೊಳಿಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದೆ.

ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಅವರ ಪೈಕಿ ಇಬ್ಬರು ಇಂದು ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ಗೈರು ಹಾಜರಿರುವ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ. ಕೆ.ಎನ್.ಜಿ. ವಕೀಲರಿಂದಃ**

ಪಿರ್ಯಾದಿ ದೂರು ಕೊಡುವಾಗ ಒಬ್ಬರೇ ಬಂದಿದ್ದರು ಜೊತೆಗೆ ಯಾರೂ ಬಂದಿರಲಿಲ್ಲ. ಘಟನೆ ನಡೆದ ದಿನ ಪಿರ್ಯಾದಿ ದೂರು ಕೊಟ್ಟಿರುವುದಿಲ್ಲ ಎಂದರೆ ಸರಿ. ಮಾರನೆಯ ದಿನ ಕೊಟ್ಟಿರುತ್ತಾರೆ ಎಂದರೆ ಸರಿ. ಚಾ.ಸಾ. 2 ಮತ್ತು 3 ರವರು ನನಗೆ ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗಲೆಂದು ಅವರ ಹೇಳಿಕೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಾನು ಘಟನಾ ಸ್ಥಳದಲ್ಲಿ ಚಾ.ಸಾ. 1, 3 ಮತ್ತು 4 ರವರ ಸಮಕ್ಷಮ ಪಂಚನಾಮೆ ಮಾಡಿರುವುದಿಲ್ಲ, ಏನನ್ನೂ ವಶಪಡಿಸಿಕೊಂಡಿರುವುದಿಲ್ಲ ಆದರೆ ಠಾಣೆಯಲಿಲ ಕುಳಿತು ಪಂಚನಾಮೆಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ. 1 ರವರು ಎಂ.ಓ 1 ಅನ್ನು ಹಾಜರುಪಡಿಸಿರುವುದಿಲ್ಲ ನಾನೇ ಅದನ್ನು

ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎಂ.ಓ 1 ರ ಮೇಲೆ ಚಾ.ಸಾ. 3 ಮತ್ತು 4 ರವರ ಸಹಿಗಳು ಇರುವುದಿಲ್ಲ ಎಂದರೆ ಸರಿ. ಎಂ.ಓ 1 ಮೂರು ಅಡಿ ಇರುವುದಿಲ್ಲ ಎರಡೂವರೆ ಅಡಿ ಇರುತ್ತದೆ ಎಂದರೆ ಸರಿಯಲ್ಲ.

ಚಾ. ಸಾ. 1 ರವರ ಮರುಹೇಳಿಕೆ ಪಡೆದಿರುವುದಿಲ್ಲ ಠಾಣೆಯಲ್ಲಿ ಕುಳಿತು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಗಾಯದ ಪ್ರಮಾಣಪತ್ರವನ್ನು ಪ್ರಕರಣಕ್ಕೆ ಅನುಕೂಲವಾಗಲೆಂದು ಸೃಷ್ಟಿ ಮಾಡಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಪಿರ್ಯಾದಿ ಆರೋಪಿಯ ಮನೆಯ ಮೇಲೆ ಶೀಟು ಹಾಕಿಕೊಂಡು ಆ ವಿಚಾರವಾಗಿ ಪಿರ್ಯಾದಿಯಲ್ಲಿ ಹೇಳಿದ್ದರೂ ಆ ಬಗ್ಗೆ ಕೂಲಂಕುಶವಾಗಿ ತನಿಖೆ ಮಾಡದೇ ಆರೋಪಿತರ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಮದ್ಯಾಹ್ನ ಗಂಟೆಯವರೆಗೆ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**